ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಬೇಲೂರು ಕೈಗಾರಿಕಾ ಕ್ಷೇತ್ರದಲ್ಲಿರುವ ಕೈಗಾರಿಕೋದ್ಯಮಗಳಿಗೆ 23 ಲಕ್ಷದ 17 ಸಾವಿರದ 710 ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

ಉಳಿದಂಥವರದ್ದು 25-7-1993 ರಿಂದ 10-7-1993ರವರೆಗೆ

ಅಧ್ಯಕ್ಷರು : ಅವರಿಗೆ ಉತ್ತರವನ್ನು ತಾವು ಕಳುಹಿಸಿಕೊಟ್ಟಿದ್ದೀರಲ್ಲಾ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಹೌದು, ಉತ್ತರವನ್ನು ಕಳುಹಿಸಿಕೊಟ್ಟಿದ್ದೇನೆ. ಅದರಂತೆ ಉಳಿದಿರುವಂಥ ಹಣವನ್ನು ಸದ್ಯದಲ್ಲಿಯೇ ನಾವು ಬಿಡುಗಡೆ ಮಾಡಿಕೊಡುತ್ತೇವೆ ಎಂಬ ಭರವಸೆಯನ್ನು ತಮ್ಮ ಮೂಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ರೇಷ್ಮೆ ಇಲಾಖೆಯ ಮಹಿಳೆಯರಿಗೆ ವಿಶೇಷ ಘಟಕ ಯೋಜನೆ

507 - ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೆವಾಡಿ) : ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಮಹಿಳೆಯರಿಗೆ ಯಾವುದಾದರೂ ವಿಶೇಷ ಘಟಕ ಯೋಜನೆ ಇದೆಯೇ?

ಆ) ಹಾಗಿದ್ದರೆ, ಈ ಯೋಜನೆ ಅಡಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ 1991-92 ಮತ್ತು 92-93ರಲ್ಲಿ ತೆಗೆದುಕೊಂಡ ಕೆಲಸಗಳಾವುವು? (ತಾಲ್ಲೂಕುವಾರು ವಂಟನೆ ಹಂಚಿಕೆ ಒದಗಿಸಿ)

ಡಾ॥ ಜಿ. ಪರಮೇಶ್ವರ (ರೇಷ್ಮೆ, ಕೃಷಿ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

Sri K.C. MODGEKAR DESAI : Mr. Speaker Sir, the reply given by the Hon'ble Minister for Sericulture is not satisfactory. Previously there was a scheme called the Special Component Plan and under that Scheme the Government was extending loan facilities, giving subsidies for the construction of houses for silk worm rearing, alloting equipments and chemical manures and fertilizers for mulbery plantations. I do not understand as to why this good scheme has been withdrawn by the Government. Women play a very unique role in the development of our society. But, unfortunately, women still lagging behind and neglected. We always talk about 30% reservation for women in all the fields. Therefore, I ask the Hon'ble Minister and the Government to continue this Special Component Plant as far as Sericulture Development is concerned.

Dr. G. Parameswara : Mr. Speaker Sir, the question is that nearly 60% of the people who work in sericulture are women. The Hon'ble Member says that the Special Component Plan is stopped. It is not true, we have not stopped; it still continues. Secondly nearly Rs. 370 crores has been provided for this programme during the last year. Especially for women there is no programme as such in the Special Component Plan and we have not yet

drawn such a programme yet. We are going to declare the year 1994 as a Sericulture year for Women. So, the question of neglecting women does not arise.

ಕಾರ್ಮಿಕ ಇಲಾಖೆಯಿಂದ ಕನಿಷ್ಠ ವೇತನದ ನಿಗದಿ

640 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಯಾವ ವಿಭಾಗಗಳಿಗೆ ಮಿನಿಮಮ್ ವೇಜಸ್ (ಕನಿಷ್ಠ ವೇತನವನ್ನು) ನಿಗದಿಪಡಿಸಿದೆ ಮತ್ತು ಯಾವಾಗ?

ಆ) ಇನ್ನು ಯಾವ ವಿಭಾಗಗಳಲ್ಲಿ ಕನಿಷ್ಠ ವೇತನವನ್ನು ನಿಗದಿ ಪಡಿಸುವುದು ಬಾಕಿ ಇದೆ?

ಇ) ಕನಿಷ್ಠ ವೇತನಗಳನ್ನು ಕಾರ್ಯಗತ ಮಾಡದಿರುವ ಖಾಸಗಿ ಹಾಗೂ ಸರ್ಕಾರಿ ಇಲಾಖೆಗಳ ವಿರುದ್ಧ ಕಾರ್ಮಿಕ ಇಲಾಖೆಯು ತೆಗೆದುಕೊಂಡಿರುವ ಕ್ರಮಗಳೇನು? ಎಷ್ಟು ಮೊಕದ್ದಮೆಗಳನ್ನು ದಾಖಲಾತಿ ಮಾಡಲಾಗಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾರ್ಮಿಕ ಸಚಿವರು) :

ಅ) 38 ಉದ್ದಿಮೆಗಳಿಗೆ (ಪಟ್ಟಿ ಲಗತ್ತಿಸಿದೆ)

ಆ) 23 ಉದ್ದಿಮೆಗಳಿಗೆ (ಪಟ್ಟಿ ಲಗತ್ತಿಸಿದೆ)

ಇ) ಕನಿಷ್ಠ ವೇತನಗಳನ್ನು ಕಾರ್ಯಗತ ಮಾಡದಿರುವ ಮಾಲೀಕರ ಮೇಲೆ ಕನಿಷ್ಠ ವೇತನ ಕಾಯ್ದೆ ಕಲಂ 20ರ ಮೇರೆಗೆ ಕ್ಲೈಮ್ ಅರ್ಜಿಗಳನ್ನು ದಾಖಲು ಮಾಡಲಾಗಿದೆ. ಕಳೆದ ಮೂರು ವರ್ಷಗಳ ವಿವರಗಳು ಈ ಕೆಳಕಂಡಂತೆ ಇವೆ.

1)	ಮೊಕದ್ದಮೆ ಹೂಡಲಾಗಿರುವ ಸಂಖ್ಯೆ	19138
2)	ಕ್ಲೈಮ್ ಅರ್ಜಿಗಳನ್ನು ಸಲ್ಲಿಸಿರುವುದು	429
3)	ಅರ್ಜಿಗಳು ವಿಲೇವಾರಿಯಾಗಿರುವುದು	333
4)	ಅರ್ಜಿದಾರರಿಗೆ ಪಾವತಿ ಮಾಡಲಾದ ಮೊತ್ತ ರೂ,	13,03,973-40

EMPLOYMENTS FOR WHICH MINIMUM WAGES HAS BEEN FIXED

Sl. No.	Name of the Employment	Date of final Notification
1.	Residential Hotels & Eating Houses	14.2.86
2.	Tailoring	8.2.93
3.	Coffee Curing	27.3.86
4.	Film Industry	22.7.92
5.	Agarbathi	5.6.84
6.	Cotton Ginning & Pressing	25.5.84
7.	Rice, Dhall & Flour Mills	25.5.84